# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

**KARNATAKA SCHOOL EXAMINATION AND ASSESSMENT BOARD**

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2024 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2024 Model Paper

---

**ತರಗತಿ : 8** | **ವಿಷಯ : ಕನ್ನಡ ತೃತೀಯ ಭಾಷೆ** | **ಅಂಕಗಳು : 50**
**ಸಮಯ : 2 ಗಂಟೆ 30 ನಿಮಿಷ**

---

**ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ**

ವಿದ್ಯಾರ್ಥಿಯ ಹೆಸರು : ______________________

ವಿದ್ಯಾರ್ಥಿಯ SATS ಸಂಖ್ಯೆ : ☐☐☐☐☐☐☐☐☐ ವಿದ್ಯಾರ್ಥಿಯ ಸಹಿ : ______________

**ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ**

ಶಾಲೆಯ ಡೈಸ್ ಕೋಡ್ : ☐☐☐☐☐☐☐☐☐☐☐

ಶಾಲೆಯ ಹೆಸರು : ______________________

ಕ್ಲಸ್ಟರ್ : ______________ ಬ್ಲಾಕ್ : ______________ ಜಿಲ್ಲೆ : ______________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ______________

**ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ**

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 11 | | 21 | |
| 2 | | 12 | | 22 | |
| 3 | | 13 | | 23 | |
| 4 | | 14 | | 24 | |
| 5 | | 15 | | 25 | |
| 6 | | 16 | | 26 | |
| 7 | | 17 | | 27 | |
| 8 | | 18 | | 28 | |
| 9 | | 19 | | 29 | |
| 10 | | 20 | | 30 | |
| – | | – | | 31 | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ______________________

ಮೌಲ್ಯಮಾಪಕರ ಸಹಿ : ______________

**I. 1 ರಿಂದ 16 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **(16 x 1 = 16)**

**1. ಬಸವರಾಜ ಸಬರದ ಅವರು ಕವಿ, ಚಿಂತಕ, ನಾಟಕಕಾರರಾಗಿ ಪ್ರಸಿದ್ಧರು.**
**ಅಡಿಗೆರೆ ಎಳೆದ ಪದವು ಈ ನಾಮಪದಕ್ಕೆ ಉದಾಹರಣೆ**

A. ಅಂಕಿತ ನಾಮ B. ರೂಢ ನಾಮ
C. ಭಾವ ನಾಮ D. ಅನ್ವರ್ಥಕ ನಾಮ

ಉತ್ತರ : ☐ ________________

**2. ನಿಸರ್ಗ ಕವಿಗಳಿಗೆ ಸ್ಫೂರ್ತಿಯ ಆಗರ.**
**ಇಲ್ಲಿ "ಕವಿ" ಪದದ ತತ್ಸಮ ರೂಪ**

A. ಕಬ್ಬ B. ಕಬ್ಬಿಗ
C. ಕಾರ್ಯ D. ಕಜ್ಜ

ಉತ್ತರ : ☐ ________________

**3. ನಾಲ್ಕು ಸುತ್ತು ಕಲ್ಲು ಕಟ್ಟಿದ ಅದ್ಭುತ ಕೆರೆ !**
**ಈ ವಾಕ್ಯದಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ**

A. ಪ್ರಶ್ನಾರ್ಥಕ B. ಪೂರ್ಣ ವಿರಾಮ
C. ಭಾವಸೂಚಕ D. ಉದ್ಧರಣ

ಉತ್ತರ : ☐ ________________

**4. ರಪರಪ ಸಿಡಿಯುತ ಭೂಮಿಗೆ ಮಳೆಹನಿ ಇಳಿದಾವ**
**ಈ ವಾಕ್ಯದಲ್ಲಿರುವ ಅನುಕರಣಾವ್ಯಯ ಪದ**

A. ರಪರಪ B. ಸಿಡಿಯುತ
C. ಮಳೆಹನಿ D. ಇಳಿದಾವ

ಉತ್ತರ : ☐ ________________

5. ಕಮಾನು ಕಟ್ಟಿದೆ; ಮೋಡದ ನಾಡಿನ ಬಾಗಿಲಿಗೆ

ಇಲ್ಲಿ ಕಮಾನು ಕಟ್ಟಿರುವುದು ಇದು

A. ಮೋಡ
B. ನಾಡು
C. ಕಾಮನಬಿಲ್ಲು
D. ಬಾಗಿಲು

ಉತ್ತರ : ______

6. "ಪಕ್ಷಿ ಸಂಕುಲದ ಆಲಯ" ಇದು

A. ದೇವಾಲಯ
B. ಮರ
C. ಊರು
D. ಮನೆ

ಉತ್ತರ : ______

7. ಹೊರಗಿನವರೇ ಬರಲಿ ಒಳಗಿನವರೇ ಇರಲಿ ಎಲ್ಲರೂ ನುಡಿಯಬೇಕಾದುದು

A. ಇಂಗ್ಲಿಷನ್ನು
B. ಕನ್ನಡವನ್ನು
C. ತಮಿಳನ್ನು
D. ಸಂಸ್ಕೃತವನ್ನು

ಉತ್ತರ : ______

8. ಬದಲಿಸಿದರೂ ಬಣ್ಣ ಗೋಸುಂಬೆಗಳಲ್ಲವಣ್ಣ

ಬಹುರೂಪಿ ಬದುಕಿನ ಪಾತ್ರಧಾರಿಗಳು ಎಂದು ಕವಿ ಇವರನ್ನು ಕರೆದಿದ್ದಾರೆ.

A. ಯಕ್ಷಗಾನದವರು
B. ನಾಟಕ ಮಾಡುವವರು
C. ಹಗಲು ವೇಷಗಾರರು
D. ಬಯಲಾಟದವರು

ಉತ್ತರ : ______

9. ಹಾಡಿಗಳಿಗೆ ಹೊಕ್ಕು ಹುಡುಕಿದರೆ "ಗೋವೆ ಹಣ್ಣು" ಸಿಕ್ಕೀತು ಎಂದು ಊರಿನ ಜನರು ಹಾಡಿಗಳಿಗೆ ಹೋಗುತ್ತಿದ್ದರು.

ಇಲ್ಲಿ ಗೋವೆ ಹಣ್ಣು ಎಂದರೆ

A. ಒಂದು ಜಾತಿಯ ಹಣ್ಣು
B. ಸೀಬೆ ಹಣ್ಣು
C. ನೇರಳೆ ಹಣ್ಣು
D. ಗೋಡಂಬಿ ಹಣ್ಣು

ಉತ್ತರ : ______

**10.** **ಕವಿ ತಮ್ಮ ಗೆಳತಿಯನ್ನು ಮತ್ತೊಮ್ಮೆ ಬಾ ಎಂದು ಕರೆಯುತ್ತಿರುವುದು**

A. ಜಗಳವಾಡಲು B. ಊರಿಗೆ ಹೋಗಲು

C. ಮನೆ ಕಟ್ಟಲು D. ಬಾಲ್ಯದುದ್ಯಾನವನು ಕಟ್ಟಲು

ಉತ್ತರ : ______

**11.** **ಸ್ತ್ರೀ ಸಂಕುಲದಲ್ಲಿ ಅತಿ ಹೆಚ್ಚಿನ ಪ್ರೀತಿ ಆದರಗಳಿಗೆ ಪಾತ್ರರಾದವರು**

A. ಸೊಸೆ B. ಮಗಳು

C. ತಾಯಿ D. ಸೋದರಿ

ಉತ್ತರ : ______

**12.** **ಮೊಳದುದ್ದ ತೆನೆಯಾಗಲಿ**

**ಬಡವನ ಮನೆಗೆ ಸಿರಿ ಬರಲಿ । ಭೂಮಿತಾಯಿ**

**ಇಲ್ಲಿ ಸಿರಿ ಬರಬೇಕಾದುದು**

A. ಭೂಮಿತಾಯಿಗೆ B. ಬಡವನ ಮನೆಗೆ

C. ಪೈರಿಗೆ D. ತೆನೆಗೆ

ಉತ್ತರ : ______

**13.** **ಧೂಳು ರೂಢಿಸುವ ಅರಿವೆ, ಕಾಯಿಪಲ್ಯೆಗೆ ಚೀಲ, ಸೀಟು ಹಿಡಿಯುವ ಅಸ್ತ್ರ, ಸಿಂಬಳ ಬುರುಕರ ಸಾಧನವಾಗಿರುವ ಬಹುಪಯೋಗಿ ವಸ್ತುವಿದು.**

A. ಟಾವೆಲ್ಲ್ B. ಸೀರೆ

C. ಕರ್ಚೀಫ್ D. ಕೈ ಚೀಲ

ಉತ್ತರ : ______

14. **ನಾ ಮೇಲಿನವನು ಬಲು ದೊಡ್ಡವನು ಎಂದು ಮೆರೆಯುತ್ತಿರುವುದು –**
**ಈ ಗುಣವನ್ನು ಸಾರುತ್ತದೆ**

A. ಮೇಲಾಗಿ ಬದುಕುವುದು
B. ಅಹಂಕಾರ
C. ಶ್ರದ್ಧೆ
D. ದೊಡ್ಡವನಂತೆ ಬದುಕುವುದು

ಉತ್ತರ : ☐ ______________________

15. **ಪಂಪಾ ಯಾತ್ರೆ ಈ ಪುಣ್ಯಕ್ಷೇತ್ರದ ಕುರಿತಾದ ಪ್ರವಾಸ ಕಥನ**

A. ಪಂಪಾವತಿ
B. ಹಂಪೆಯ ವಿರೂಪಾಕ್ಷ
C. ಪಂಪಾ ನದಿ
D. ಮಲೆನಾಡ ಕಾಡು

ಉತ್ತರ : ☐ ______________________


16. **"ರೈತ ಮಿತ್ರ" ಎಂದೇ ಪ್ರಸಿದ್ಧವಾದ ಹುಳು**

A. ಎರೆ ಹುಳು
B. ಕಂಬಳಿ ಹುಳು
C. ಜಂತು ಹುಳು
D. ರೇಷ್ಮೆ ಹುಳು

ಉತ್ತರ : ☐ ______________________

**II. 17 ರಿಂದ 20 ರವರೆಗಿನ ಪ್ರಶ್ನೆಗಳಿಗೆ ನಿಗದಿ ಪಡಿಸಿರುವ ಸ್ಥಳದಲ್ಲಿ ಒಂದು ವಾಕ್ಯದಲ್ಲಿ ಉತ್ತರಿಸಿ.** **(4 x 1 = 4)**

17. **ಈ ಚಿತ್ರದಲ್ಲಿರುವ ಕವಿಯನ್ನು ಹೆಸರಿಸಿ.**



______________________

______________________

18. ಭಾರತದ ಮಕ್ಕಳ ಕಲ್ಯಾಣ ಮಂಡಳಿಯವರು ನೀಡುವ ಸಾಹಸಿ ಪ್ರಶಸ್ತಿಗೆ ಆಯ್ಕೆಯಾದ ಕೇರಳದ ಬಾಲಕಿ ಯಾರು ?


19. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ಗಾದೆಗೆ ಅನ್ವಯವಾಗುವ ಬಹುಪಯೋಗಿ ವಸ್ತು ಯಾವುದು ?

20. ಚಿತ್ರ ನೋಡಿ ನಿಮಗೆ ಇಷ್ಟವಾದ ಶೀರ್ಷಿಕೆ ನೀಡಿ



**III.** 21 ರಿಂದ 26 ರವರೆಗಿನ ಪ್ರಶ್ನೆಗಳಿಗೆ ನಿಗದಿ ಪಡಿಸಿರುವ ಸ್ಥಳದಲ್ಲಿ ಉತ್ತರಿಸಿ. **(6 x 2 = 12)**

**21.** ಚಿತ್ರದಲ್ಲಿ ನೀಡಿರುವ ಮರಗಳಲ್ಲಿ ನಿಮಗೆ ಇಷ್ಟವಾದ ಮರದ ಕುರಿತು ಮೂರು ಸಾಲುಗಳನ್ನು ಬರೆಯಿರಿ.



**22.** "ಹೊರಗಿನವರೇ ಬರಲಿ ಒಳಗಿನವರೇ ಇರಲಿ

ಎಲ್ಲರೂ ಕನ್ನಡವ ನುಡಿಯಲಿ । ನಾಡೊಳಗ

ನಗಿನವಿಲು ಗರಿಬಿಚ್ಚಿ ಕುಣಿಯಲಿ"

ಈ ಸಾಲುಗಳ ಸಾರಾಂಶವನ್ನು ವಿವರಿಸಿ.

23. ಚಿತ್ರ ಗಮನಿಸಿ ಪ್ರಕೃತಿಯ ಸೊಬಗನ್ನು ಮೆಚ್ಚಿ ನಿಮ್ಮ ಮಾತುಗಳಲ್ಲಿ ಬರೆಯಿರಿ.



24. ನೀಡಿರುವ ಚಿತ್ರ ಗಮನಿಸಿ ಇಲ್ಲಿ ನಡೆಯುತ್ತಿರುವ ವ್ಯವಸಾಯದ ವಿದ್ಯಮಾನವನ್ನು ಕುರಿತು ಎರಡು ಸಾಲುಗಳಲ್ಲಿ ವಿವರಿಸಿ.



25. "ಚಿಕ್ಕ ಮಕ್ಕಳ ಮುಂದೆ ದೊಡ್ಡವರು ಚಿಕ್ಕವರಾಗಿ ಬಿಡುತ್ತಾರೆ"
ಈ ಹೇಳಿಕೆಯನ್ನು 'ಮುಗ್ಧ ಹೂಗಳು' ಎಂಬ ಪದ್ಯದ ಹಿನ್ನೆಲೆಯಲ್ಲಿ ಎರಡು–ಮೂರು ಸಾಲುಗಳಲ್ಲಿ ವಿವರಿಸಿ.

26. ಆನೆಯು ಊರಿನೊಳಗೆ ನುಗ್ಗಿದಾಗ ಕೋವಿಯ ಗುಂಡು ಢಂ ಎಂದು ಸಿಡಿಯಿತು. ಆನೆಗಳು ಧಪಧಪ ಎಂದು ಸದ್ದು ಮಾಡುತ್ತಾ ಊರೊಳಗೆ ಬಂದವು. ಇದನ್ನು ನೋಡಿದ ಮಕ್ಕಳು ಚಿರ್ರನೆ ಚೀರಿದರು. ಕಬ್ಬಿನ ಗದ್ದೆಗೆ ಆನೆಗಳು ಸರಸರನೆ ನುಗ್ಗಿದವು.
ಇಲ್ಲಿರುವ ಅನುಕರಣಾವ್ಯಯಗಳನ್ನು ಗುರ್ತಿಸಿ ಬರೆಯಿರಿ.

**IV.** 27 ರಿಂದ 31 ರವರೆಗಿನ ಪ್ರಶ್ನೆಗಳಿಗೆ ಸೂಚನೆ ಅನುಸಾರ ನಿಗದಿಪಡಿಸಿರುವ ಸ್ಥಳದಲ್ಲಿ ಉತ್ತರಿಸಿ. **(3 x 3 = 9)**

27. ರಹೀಮ, ಸೋಮಣ್ಣ ಮತ್ತು ಡೇವಿಡ್ ಎಂಬ ಮೂವರು ರೈತರು ಈ ಸಲದ ಬೆಳೆಯಿಂದ ಖುಷಿಯಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಅವರ ನಡುವಿನ ಸಂಭಾಷಣೆಯನ್ನು ಊಹಿಸಿ ಬರೆಯಿರಿ.

**28.** **ಮಳೆಯನ್ನು ವಿವಿಧ ರೂಪಗಳಲ್ಲಿ ಕಂಡ ನಿಮ್ಮ ಅನುಭವವನ್ನು ಕುರಿತು ಮೂರು ನಾಲ್ಕು ವಾಕ್ಯಗಳಲ್ಲಿ ಬರೆಯಿರಿ.**

**29.** **ನೀಡಿರುವ ಪಠ್ಯಭಾಗವನ್ನು ಓದಿ ಅರ್ಥೈಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

ಶಬರಿಯು ಮತಂಗ ಮುನಿಗಳ ಆಶ್ರಮದಲ್ಲಿದ್ದ ಓರ್ವ ವೃದ್ಧೆ. ಈಕೆ ಮತಂಗ ಮುನಿಗಳ ಕಾಲಾನಂತರ ಶ್ರೀರಾಮನ ದರ್ಶನಕ್ಕಾಗಿ ಕಾತರಿಸಿ ಕಾದಿದ್ದಳು. ಸೀತಾಪರಹಣದ ನಂತರ ದುಃಖಿತನಾಗಿ ಸಾಗುತ್ತಿದ್ದ ರಾಮನು ತಪಸ್ವಿಯೊಬ್ಬರ ಸಲಹೆಯಂತೆ ತನ್ನ ತಮ್ಮನಾದ ಲಕ್ಷ್ಮಣನೊಡಗೂಡಿ ಮತಂಗಾಶ್ರಮಕ್ಕೆ ಬರುತ್ತಾನೆ. ಅಲ್ಲಿ ಶಬರಿಯು ತನ್ನ ಬಹುದಿನಗಳ ಕಾಯುವಿಕೆ ಕೊನೆಗೂ ಫಲಿಸಿತೆಂದು ಖುಷಿಪಟ್ಟು ಸಂಭ್ರಮದಿಂದ ಆತನನ್ನು ಉಪಚರಿಸುತ್ತಾಳೆ. ಆತನೂ ತನ್ನ ತಾಯಿಯ ಪ್ರೇಮವನ್ನು ಶಬರಿಯಲ್ಲಿ ಕಾಣುತ್ತಾನೆ. ಶಬರಿಯು ಶ್ರೀರಾಮನ ದರ್ಶನಾನಂತರ ತನ್ನ ಬದುಕಿನಲ್ಲಿ ಸಾಧಿಸುವಂಥಾದ್ದೇನಿಲ್ಲವೆಂದು ದಿವ್ಯಸಾಯುಜ್ಯವನ್ನು ಹೊಂದುತ್ತಾಳೆ. ನಿಷ್ಕಲ್ಮಶ ಪ್ರೀತಿ, ಆದರ, ಆತಿಥ್ಯ, ಭಕ್ತಿ, ವಿನಯ, ಮುಗ್ಧತೆಗಳಿಗೆ ಶಬರಿ ಸಂಕೇತವಾಗಿದ್ದಾಳೆ.

**1. ಶಬರಿ ಯಾರು** ?

**2. ಶಬರಿ ಯಾರ ದರ್ಶನಕ್ಕಾಗಿ ಕಾದಿದ್ದಳು** ?

3. ಶಬರಿ ಯಾವುದರ ಸಂಕೇತವಾಗಿದ್ದಾಳೆ ?

**V**

**30.** "ಆಕಳು ಕಪ್ಪಾದರೆ ಹಾಳು ಕಪ್ಪೇ ?

ಈ ಗಾದೆಯನ್ನು ವಿಸ್ತರಿಸಿ ನಾಲ್ಕೈದು ಸಾಲುಗಳಲ್ಲಿ ಬರೆಯಿರಿ. **4 ಅಂಕ**

VI

**31. ಹೇಮಾವತಿ ಎಂಬ ವಿದ್ಯಾರ್ಥಿನಿ ತನ್ನ ವಿದ್ಯಾಭ್ಯಾಸದ ಕುರಿತು ತಂದೆಗೆ ಪತ್ರ ಬರೆದಿದ್ದಾಳೆ. ಈ ಪತ್ರದಲ್ಲಿ ಬಿಟ್ಟು ಹೋಗಿರುವ ಅಂಶಗಳನ್ನು ಪೂರ್ಣಗೊಳಿಸಿ.**

ದಿನಾಂಕ : ______________

ಸ್ಥಳ : ______________

ಇವರಿಂದ,

ಹೇಮಾವತಿ
8ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ಬೇಲೂರು

ಪ್ರೀತಿಯ ತಂದೆಯವರಿಗೆ,

________________________________________

________________________________________

________________________________________

________________________________________

________________________________________

________________________________________

________________________________________

________________________________________

ಇತಿ ನಮಸ್ಕಾರಗಳು

ತಮ್ಮ ಪ್ರೀತಿಯ ಮಗಳು

______________

ಇವರಿಗೆ,

______________

______________

______________

______________